App. F. IX-4

Previous References
Cens. 10 – 29, Ar. 5

1939.
Cens.

File No. 18–39
Serial Nos. 6

Later References.

PRESERVED

GENERAL AND REVENUE SECRETARIAT.

Serial Nos. 1

Part B for July 40.

SUBJECT.

Circular No. 5 re: Further Instructions for House-Numbering and House-Lists

WD 0573–GPB–22,500–12-9-39

15.7.40

Census. 18-39-6 G.M.S. 868

OFFICE OF THE CENSUS SUPERINTENDENT
IN MYSORE,

BEC Cen/6 2 JUN 1940 GOVT. OF MYSORE

Bangalore, 21st June, 1940.

OFFICE OF THE SECRETARY TO THE COUNCIL. - 4 JUL 1940 No. 169

11148 encls: 6.

FROM

P. H. KRISHNA RAO, ESQ., M.A.,
CENSUS SUPERINTENDENT IN MYSORE,
BANGALORE.

To

The Secretary to Government
Development Department,
Bangalore.

SIR,

I have the honour to forward herewith for the information of Government, 3 copies of Circular No:5 dated 15th June 1940 along with the same number of copies of Part I of the Mysore Code 1941 (Provisional). The draft Code was approved by Government in Development Secretary's letter No: G.10154/Cen.35-39-2 dated 6th June 1940.

I have the honour to be,

Sir,

Your most obedient servant,

Census Superintendent.

Serial No.

Submitted for perusal with the Connected papers. Reference is invited to the corresponding file of the previous Census. (10-29-5) Containing the Kannada Translation of Chapter III ~~is also put up~~.

Reg 'P'

26/6.

26/6

27/6

Dev Dey)

2nd. ulr) 10.7.40

GOVT OF MYSORE
OFFICE OF SECOND MEMBER OF COUNCIL
JUL 1940
169

NOTE—Contn. Sheet.

C3

MYSORE CENSUS 1941.

Circular No:5
Encs:

Office of the Census Superintendent
in Mysore,
Dated Bangalore, 15th June 1 9 4 0.

OFFICIAL MEMORANDUM.

To

ALL THE CHARGE SUPERINTENDENTS.

Subject: Further instructions regarding house-numbering and house-lists.

....

The attention of the Charge Superintendents is invited to para 6 of Circular No: 4 dated 31st May 1940 issuing instructions regarding house-numbering. Copies of reprints of Chapter III of the Census Code Part I in Kannada containing full instructions for house-numbering are sent herewith for being distributed to such of the Village Officers and Municipal Officers as are engaged in the work of house-numbering. Copies should be sparingly used and given only to such village and other officers as can make use of them. It is not necessary to have as many copies as there are villages; for, the same Shanbhogue or Patel may be in charge of house-numbering in more than one village. It is also not necessary to give a copy both to the Patel and Shanbhogue of a village simply because they are both literate or they are both in charge of house-numbering. One copy should serve both. The intention is that these books should be readily available only as books of reference. They can never replace satisfactorily oral instructions which should be relied on for instructing and training officers engaged in house-numbering. The Charge Superintendents are therefore requested to convene meetings of Village Officers and Municipal and other Officials and explain to them the details of house-numbering as set forth in this booklet and in Circular No: 4.

Flag K
Circle Flag P
Census 10-29.

(Sd) P.H.KRISHNA RAO.

Census Superintendent.

Copy of the above is forwarded with compliments to.....

....

CENSUS SUPERINTENDENT.

K.S.

[redacted] ಬಹುದಾದ ಒಂದೊಂದು ಆವರಣಕ್ಕೂ ಪಾಂಕ್ತ್ಯಾಂಶಗಳಿಂದೊಂದು ಸಂಖ್ಯೆಯನ್ನು ಕೊಡಬೇಕು.

ಈ. ವಾಸದ ಮನೆ.—ವಾಸದ ಮನೆ ಅಂದರೆ ಒಂದು ಅಡಿಗೆ ಒಂದು ಊಟ ಮಾಡುವ ಸಂಸಾರವೊಂದು ವಾಸಮಾಡುತ್ತಿರುವ ಮನೆ ಅಥವಾ ಮನೆಯ ಭಾಗ. ಮನೆಯವರೊಂದಿಗೆ ವಾಸವಾಗಿರುವ ಆಳುಗಳು ಆ ಸಂಸಾರದಲ್ಲಿ ಸೇರಿದಂತೆ ಭಾವಿಸತಕ್ಕದ್ದು. ಒಂದು ವಾಸದ ಮನೆ ಹೌದೇ ಅಲ್ಲವೆ ಎನ್ನುವದಕ್ಕೆ ಒಂದು ಅಡಿಗೆ ಒಂದು ಊಟ ಮಾಡುವವರು ವಾಸವಾಗಿರುವ ಭಾಗ ಯಾವುದು ಎನ್ನುವುದು ಗುರುತು.

ಮನೆಯಲ್ಲಿ ಕೆಲಸಮಾಡುವ ಆಳುಗಳು ಕಟ್ಟಡದ ಬೇರೆ ಭಾಗದಲ್ಲಿ ವಾಸವಿದ್ದು ಬೇರೆ ಅಡಿಗೆ ಊಟಮಾಡುತ್ತಿರುವ ಪಕ್ಷದಲ್ಲಿ ಹಾಗೆ ಅವರು ವಾಸಮಾಡುವ ಸ್ಥಳಗಳಿಗೆ ಬೇರೆ ಬೇರೆ ನಂಬರುಗಳನ್ನು ಕೊಡತಕ್ಕದ್ದು.

ಊ. ವಠಾರಕ್ಕೆ ನಂಬರು ಹಾಕುವುದು.—ಒಂದು ಮನೆಯಲ್ಲಿ ಒಂದು ಸಂಸಾರ ಮಾತ್ರ ವಾಸವಾಗಿದ್ದರೆ ಅಂಥಾ ಮನೆಗೆ ಒಂದೇ ಒಂದು ನಂಬರನ್ನು ಹಾಕತಕ್ಕದ್ದು. ಆ ನಂಬರನ್ನು ಅಂಥಾ ಮನೆಯ ತಲೆಬಾಗಿಲಿನ ಕದದ ಬಳಿ ಹಾಕಬೇಕು.

ಎರಡು ಮೂರು ಸಂಸಾರಗಳು ಒಂದು ಕಟ್ಟಡದಲ್ಲಿ ವಾಸಮಾಡುತ್ತಿರುವಲ್ಲಿ ಒಂದೊಂದು ಸಂಸಾರದ ವಾಸದ ಮನೆಯ ತಲೆಬಾಗಿಲಿನಲ್ಲೂ ಬೇರೆ ನಂಬರನ್ನು ಹಾಕಬೇಕು.

ಒಂದೊಂದು ಸಂಸಾರದ ವಾಸದ ಭಾಗಕ್ಕೂ ಬೇರೆ ತಲೆ ಬಾಗಿಲಿದ್ದರೆ ಅಂಥಂಥಾ ತಲೆಬಾಗಿಲಿಗೆ ಆಯಾ ಮನೆಯ ನಂಬರನ್ನು ಹಾಕತಕ್ಕದ್ದು. ಎಲ್ಲಾ ಸಂಸಾರಗಳೂ ಒಂದು ತಲೆಬಾಗಿಲಿನಲ್ಲಿ ಓಡಾಡುತ್ತಿರುವಲ್ಲಿ ಒಳಗಡೆ ವಾಸದ ಮನೆಯ ಬಾಗಿಲಿನ ಮೇಲೆ ನಂಬರು ಹಾಕಿರುವುದಲ್ಲದೆ ಇಂಥ ತಲೆಬಾ

Reprint.

೧೯೪೧ನೆಯ ಸೆನ್ಸಸ್.

ಮೂರನೇ ಅಧ್ಯಾಯ.

ಮನೆಗಳಿಗೆ ಮತ್ತು ಇತರ ಕಟ್ಟಡಗಳಿಗೆ ಅಂಕಿಹಾಕುವುದು.

ಸೆಕ್ಷನ್ ೧.

ಯಾವ ಕಟ್ಟಡಗಳಿಗೆ ನಂಬರು ಹಾಕತಕ್ಕದ್ದು.

೫೪. ಸಾಮಾನ್ಯ ನಿಯಮ.—ಒಂದೊಂದು ಗ್ರಾಮ, ಪಟ್ಟಣ, ನಗರದಲ್ಲೂ ಸಂಸಾರ ಇರುವ ಅಥವಾ ಇಲ್ಲದಿರುವ ಒಂದೊಂದು ವಾಸದ ಮನೆಗೂ ೧೯೪೧ನೇ ಇಸವಿ ಮಾರ್ಚಿ ೧ನೇ ತಾರೀಖಿನ ದಿನ ಯಾರಾದರೂ ವಾಸಮಾಡಬಹುದಾದ ಒಂದೊಂದು ಆವರಣಕ್ಕೂ ಪಾಂಕ್ತವಾಗಿ ಒಂದೊಂದು ಸಂಖ್ಯೆಯನ್ನು ಕೊಡಬೇಕು.

೫೫. ವಾಸದ ಮನೆ.—ವಾಸದ ಮನೆ ಅಂದರೆ ಒಂದು ಅಡಿಗೆ ಒಂದು ಊಟ ಮಾಡುವ ಸಂಸಾರವೊಂದು ವಾಸಮಾಡುತ್ತಿರುವ ಮನೆ ಅಥವಾ ಮನೆಯ ಭಾಗ. ಮನೆಯವರೊಂದಿಗೆ ವಾಸವಾಗಿರುವ ಆಳುಗಳು ಆ ಸಂಸಾರದಲ್ಲಿ ಸೇರಿದಂತೆ ಭಾವಿಸತಕ್ಕದ್ದು. ಒಂದು ವಾಸದ ಮನೆ ಹೌದೇ ಅಲ್ಲವೆ ಎನ್ನುವದಕ್ಕೆ ಒಂದು ಅಡಿಗೆ ಒಂದು ಊಟ ಮಾಡುವವರು ವಾಸವಾಗಿರುವ ಭಾಗ ಯಾವುದು ಎನ್ನುವುದು ಗುರುತು.

ಮನೆಯಲ್ಲಿ ಕೆಲಸಮಾಡುವ ಆಳುಗಳು ಕಟ್ಟಡದ ಬೇರೆ ಭಾಗದಲ್ಲಿ ವಾಸವಿದ್ದು ಬೇರೆ ಅಡಿಗೆ ಊಟಮಾಡುತ್ತಿರುವ ಪಕ್ಷದಲ್ಲಿ ಹಾಗೆ ಅವರು ವಾಸಮಾಡುವ ಸ್ಥಳಗಳಿಗೆ ಬೇರೆ ಬೇರೆ ನಂಬರುಗಳನ್ನು ಕೊಡತಕ್ಕದ್ದು.

೫೬. ವಠಾರಕ್ಕೆ ನಂಬರು ಹಾಕುವುದು.—ಒಂದು ಮನೆಯಲ್ಲಿ ಒಂದು ಸಂಸಾರ ಮಾತ್ರ ವಾಸವಾಗಿದ್ದರೆ ಅಂಥಾ ಮನೆಗೆ ಒಂದೇ ಒಂದು ನಂಬರನ್ನು ಹಾಕತಕ್ಕದ್ದು. ಆ ನಂಬರನ್ನು ಅಂಥಾ ಮನೆಯ ತಲೆಬಾಗಿಲಿನ ಕದದ ಬಳಿ ಹಾಕಬೇಕು.

ಎರಡು ಮೂರು ಸಂಸಾರಗಳು ಒಂದು ಕಟ್ಟಡದಲ್ಲಿ ವಾಸಮಾಡುತ್ತಿರುವಲ್ಲಿ ಒಂದೊಂದು ಸಂಸಾರದ ವಾಸದ ಮನೆಯ ತಲೆಬಾಗಿಲಿನಲ್ಲೂ ಬೇರೆ ನಂಬರನ್ನು ಹಾಕಬೇಕು.

ಒಂದೊಂದು ಸಂಸಾರದ ವಾಸದ ಭಾಗಕ್ಕೂ ಬೇರೆ ತಲೆ ಬಾಗಿಲಿದ್ದರೆ ಅಂಥಂಥಾ ತಲೆದಾಗಿಲಿಗೆ ಆಯಾ ಮನೆಯ ನಂಬರನ್ನು ಹಾಕತಕ್ಕದ್ದು. ಎಲ್ಲಾ ಸಂಸಾರಗಳೂ ಒಂದು ತಲೆಬಾಗಿಲಿನಲ್ಲಿ ಓಡಾಡುತ್ತಿರುವಲ್ಲಿ ಒಳಗಡೆ ವಾಸದ ಮನೆಯ ಬಾಗಿಲಿನ ಮೇಲೆ ನಂಬರು ಹಾಕಿರುವುದಲ್ಲದೆ ಇಂಥ ತಲೆದಾ

ಗಿಲಿನಲ್ಲಿ ಆ ಎಲ್ಲಾ ನಂಬರುಗಳನ್ನೂ ನಮೂದಿನಬೇಕು. ಎಂದರೆ ಒಂದು ಕಟ್ಟಡವಿದೆ ಎನ್ನಿ. ಅದರಲ್ಲಿ ಐದು ಸಂಸಾರದವರು ವಾಸಮಾಡುತ್ತಾರೆ. ಆವರು ವಾಸಮಾಡುತ್ತಿರುವ ಭಾಗದಲ್ಲಿ ಅವರವರ ಮನೆಯ ಬಾಲಿಗಿನ ಮೇಲೆ ೫೦, ೫೧, ೫೨, ೫೩, ೫೪, ಎಂದು ನಂಬರುಗಳನ್ನು ಹಾಕಿದೆಯೆಂದು ಇಟ್ಟುಕೊಳ್ಳೋಣ. ಈ ಐದು ಸಂಸಾರದವರೂ ಬೀದಿಗೆ ಹೋಗಬೇಕಾದರೆ ಒಂದು ತಲೆಬಾಗಿಲಿನಿಂದ ಹೋಗುತ್ತಾರೆ ಎನ್ನಿ. ಆಗ ಬೀದಿಯಕಡೆ ತಲೆಬಾಗಿಲಿನ ಮೇಲೆ ೫೦–೫೪ ಎಂದು ಸಂಖ್ಯೆಯನ್ನು ನಮೂದಿನಬೇಕು. ಇದರಿಂದ ತಲೆಬಾಗಿಲನ್ನು ನೋಡಿದವರಿಗೆ ೫೦ ರಿಂದ ೫೪ರ ವರಿಗಿನ ಐದು ವಾಸದ ಮನೆಗಳು ಈ ಕಟ್ಟಡದಲ್ಲಿವೆ ಎಂದು ಸೂಚಿಸಿದಂತಾಗುತ್ತದೆ. ತಲೆಬಾಗಿಲಿಂದ ಒಳಗೆ ಹೋದರೆ ಐದು ಸಂಸಾರದ ವಾಸದ ಮನೆಗಳಿಗೂ ಬೇರೆ ಬೇರೆ ನಂಬರುಗಳು ಇರುತ್ತವೆ. ಒಂದೇ ಕಟ್ಟಡದಲ್ಲಿ ವಾಸವಾಗಿರುವ ಹಲವು ಸಂಸಾರಗಳು ಬೇರೆ ಬೇರೆ ಬಾಗಿಲುಗಳನ್ನು ಉಪಯೋಗಿನುವ ಸಂದರ್ಭದಲ್ಲೂ ಆ ಕಟ್ಟಡದ ತಲೆದಾಗಿಲಿಗೆ ಅದರಲ್ಲಿ ವಾಸವಾಗಿರುವ ಎಲ್ಲಾ ಸಂಸಾರಗಳ ವಾಸದ ಮನೆಯ ನಂಬರುಗಳನ್ನೂ ನಮೂದಿನು ವುದೇ ಕ್ಷೇಮ. ಹೀಗೆ ಮಾಡಿದಲ್ಲಿ ಎನ್ಯೂಮರೇಟರು ಅಜಾಗ್ರತೆಯಿಂದ ಯಾವ ದಾದರೊಂದು ವಾಸದ ಮನೆಯ ಎಣಿಕೆಯನ್ನು ಮರೆಯದಂತೆ ಆಗುತ್ತದೆ.

ಒಂದು ಕಟ್ಟಡದಲ್ಲಿ ಬೇರೆ ಬೇರೆ ಸಂಸಾರಕ್ಕೆ ಅನುಕೂಲವಾದ ವಸಾರ ಮಹಡಿ ಮೊದಲಾದ್ದು ಇರುವಪಕ್ಷದಲ್ಲಿ, ಸೆನ್ಸಸ್ ನಂಬರು ಕೊಡುವಾಗ ಅವುಗಳಲ್ಲಿ ಯಾರೂ ವಾಸಮಾಡದೆ ಇದ್ದಾಗ್ಯೂ ಕೂಡ, ಅಂಥಾ ವಸಾರ ಮತ್ತು ಮಹಡಿಗಳನ್ನು ಬೇರೆ ಬೇರೆ ವಾಸದ ಮನೆಗಳಂತೆ ಭಾವಿಸಿ ಅವುಗಳಿಗೆ ಬೇರೆ ಬೇರೆ ನಂಬರುಗಳನ್ನು ಕೊಡತಕ್ಕದ್ದು. ಹೊಟೇಲುಗಳಲ್ಲಿ ಬೇರೆ ಬೇರೆ ಪ್ರಯಾಣಿಕರ ಅಥವಾ ಸಂಸಾರಗಳ ವಾಸಕ್ಕೆ ಅನುಕೂಲವಾಗಿರುವ ಭಾಗಗಳಿಗೆ ಬೇರೆ ಬೇರೆ ನಂಬರುಗಳನ್ನು ಕೊಡತಕ್ಕದ್ದು.

೫೭. ಇತರ ಕಟ್ಟಡಗಳು ಗಿರಣಿಗಳು, ಕಾರ್ಖಾನೆಗಳು ದಾರ್ಲೈಸಿಲ್ಲೇದಾರ್ ಲೈನುಗಳು, ಮಠ, ಮಕ್ಕಾ ಮುಂತಾದುವುಗಳಿಗೂ ವಾಸದ ಮನೆಗಳಿಗೆ ಹೇಗೋ ಹಾಗೆ ಒಂದೊಂದು ನಂಬರನ್ನು ಕೊಡಬೇಕು. ಕಛೇರಿ ಕಟ್ಟಡಗಳು, ದೇವಸ್ಥಾನಗಳು, ವಾಸದ ಮನೆಯಲ್ಲಿ ಸೇರದ ಬೇರೆಯಾದ ಅಂಗಡಿಗಳು, ಛತ್ರಗಳು, ಧರ್ಮಶಾಲೆಗಳು, ಮುನಾಫರ್ ಬಂಗಲೆಗಳು, ಪಾಳಿ ಗೋಡೆ ಹಾಕಿರುವ ಬಂಡಿ ಮೋಟುಗಳು, ಕೂಲಿ ಜನರಿಗಾಗಿ ತತ್ಕಾಲಕ್ಕೆ ಹಾಕಿಗುವ ಗುಡಿಸಲುಗಳು, ಇವೆಲ್ಲಕ್ಕೂ ನಂಬರು ಬೀಳಬೇಕು.

ಡೇರಾಗಳು, ರಾಮಟೆ ಮೊದಲಾದ ಜನರು ವಾಸಮಾಡಬಹುದಾದ ಸ್ಥಳಗಳನ್ನು ವಾನದ ಮನೆಗಳಂತೆ ಭಾವಿಸಿ ಅವುಗಳಿಗೆ ಬೇರೆ ಬೇರೆ ನಂಬರುಗಳನ್ನು ಕೊಡತಕ್ಕದ್ದು.

೫೮. ನಂಬರು ಹಾಕುವುದರ ಉದ್ದೇಶ.—ಸೆನ್ಸಸ್ ದಿನ ಆಕಸ್ಮಾತ್ ಯಾವ ಕಾರಣದಿಂದಲೇ ಆಗಲಿ ಅವರವರ ಮನೆಯಲ್ಲಿ ಎಣಿಕೆಗೆ ಬರದೆ ಇರುವ ಯಾವ ಒಬ್ಬ ಇಬ್ಬರಾದರೂ ಜನರು ತಂಗಬಹುದಾದ ಸ್ಥಳವನ್ನೆಲ್ಲಾ ಎನ್ಯೂಮರೇಟರ್ ಹೋಗಿ ನೋಡಬೇಕು. ಆದ್ದರಿಂದಲೇ ವಾಸದಮನೆಗಳಿಗಲ್ಲದೆ ಇತರ ಕಟ್ಟಡಗಳಿಗೂ ನಂಬರು ಹಾಕಬೇಕೆಂದು ನಿಯಮವಿರುವುದು.

೫೯. ನಂಬರು ಹಾಕದೇ ಬಿಡಬಹುದಾದ ಕಟ್ಟಡಗಳು.—ಪಾಳುಮನೆಗಳನ್ನು ನಂಬರು ಹಾಕದೆ ಬಿಡಬಹುದು. ಖಾನೇಷುಮಾರಿ ಅಥವಾ ಮುನಿಸಿಪಲ್ ಲೆಖ್ಖಗಳಲ್ಲಿ ಬರಿಯ ನಿವೇಶನಗಳಿಗೆ ನಂಬರು ಕೊಡುವುದುಂಟು. ಇಂಥಾ ನಿವೇಶನಗಳಿಗೆ ಸೆಕ್ಷನ್ ನಂಬರುಗಳು ಕೊಡಬೇಕಾದದ್ದಿಲ್ಲ. ಹೀಗೆಯೇ ದನದ ಕೊಟ್ಟಿಗೆ, ಲಾಯ, ಹಿಂದುಗಡೆಯ ಮನೆ, ಇವುಗಳಿಗೂ ನಂಬರು ಕೊಡಬೇಕಾದದ್ದಿಲ್ಲ. ಯಾವುದಾದರೂ ನಿವೇಶನದ ಮೇಲೆ ಕಟ್ಟಡದ ಕೆಲಸ ನಡೆಯುತ್ತಿರುವಲ್ಲಿ ಅಂಥಾ ಕಟ್ಟಡ ಸೆಕ್ಷನ್ ದಿನಕ್ಕೆ ಮುಂದಾಗಿ ಮುಗಿದು ವಾಸಕ್ಕೆ ಅರ್ಹವಾಗುವ ಸಂದರ್ಭವಿದ್ದರೆ ಅದಕ್ಕೆ ಒಂದು ನಂಬರನ್ನು ಕೊಡಬೇಕು. ಸೆಕ್ಷನ್ನಿಗೆ ಮೊದಲು ಅದು ಮುಗಿಯುವ ಸಂದರ್ಭವಿಲ್ಲದಿದ್ದರೆ ಅಂಥಾ ಕಟ್ಟಡಕ್ಕೆ ನಂಬರು ಕೊಡಬೇಕಾದದ್ದಿಲ್ಲ.

೬೦. ಯಾವ ಅಂಗಡಿಗೆ ಬೇರೆ ನಂಬರು ಅನಾವಶ್ಯಕ.—ಅಂಗಡಿದಾರರು ವಾಸದ ಮನೆಯ ಒಂದು ಭಾಗವನ್ನು ಅಂಗಡಿಯಾಗಿ ಮಾಡಿಕೊಂಡಿದ್ದಲ್ಲಿ ಅಂಥಾ ಅಂಗಡಿ ಭಾಗಕ್ಕೆ ಬೇರೆ ನಂಬರು ಕೊಡಬೇಕಾದದ್ದಿಲ್ಲ.

೬೨. ರೈಲ್ವೆ ಕಟ್ಟಡಗಳು, ಕೈಕಂಬಗಳ ನಡುವೆ ಇರತಕ್ಕವು ಮತ್ತು ಕೈಕಂಬಗಳ ಹೊರಗೆ ಇರತಕ್ಕವು.—ರೈಲ್ವೆ ಸ್ಟೇಷನ್ ಸಮೀಪದಲ್ಲಿ ಕೈಕಂಬಗಳ ಮಧ್ಯಭಾಗದಲ್ಲಿರುವ ಎಲ್ಲಾ ಕಟ್ಟಡಗಳಿಗೂ ಮತ್ತು ಕೈಕಂಬಗಳ ಹೊರಗೆ ಇರುವ ರೈಲ್ವೆ ಕಟ್ಟಡಗಳಿಗೂ ಸ್ಥಳೀಯ ನೌಕರರು ನಗರ, ಪಟ್ಟಣ ಮತ್ತು ಗ್ರಾಮದ ಕಟ್ಟಡಗಳೊಂದಿಗೆ ನಂಬರು ಹಾಕಬೇಕು.

೬೩. ಪೌಳಿಗೋಡೆಯಿಲ್ಲದ ಬಂಡಿಮೋಟುಗಳು ಮತ್ತು ಹೊಳೇಕಡುಗಳು.—ಪೌಳಿ ಗೋಡೆಯಿಲ್ಲದ ಬಂಡಿಮೋಟುಗಳಿಗೂ, ಸೈನ್ಯ ತಂಗುವ ಸ್ಥಳಗಳಿಗೂ ಹೊಳೆಗಳ ದಡದ ಕಡುಗಳಿಗೂ ನಂಬರು ಕೊಡಬೇಕಾದದ್ದಿಲ್ಲ. ಆದರೂ ಸೆಕ್ಷನ್ ದಿನ ಎನ್ಯೂಮರೇಟರ್ ಆ ಸ್ಥಳಗಳಿಗೆ ಹೋಗಬೇಕಾಗಿರುವುದರಿಂದ ಮನೆಗಳ ಪಟ್ಟಿಯ ಅಡಿಯಲ್ಲಿ ಇಂಥಾ ಸ್ಥಳಗಳನ್ನು ನಂಬರು ಕೂಡದೆ ನಮೂದಿಸಬೇಕು.

ಸೆಕ್ಷನ್ ೨.

ನಂಬರು ಮಾಡುವುದನ್ನು ಕುರಿತು ತಿಳಿಸೀಲು.

೬೪. ನಂಬರು ಮಾಡುವವರು.—ಮುನಿಸಿಪಾಲಿಟಿಗಳಿರುವ ಸ್ಥಳಗಳಲ್ಲಿ ಮುನಿಸಿಪಲ್ ಅಧಿಕಾರಿಗಳು ಮನೆಗಳಿಗೆ ಸೆಕ್ಷನ್ ನಂಬರು ಹಾಕತಕ್ಕದ್ದು. ಉಳಿದ ಸ್ಥಳಗಳಲ್ಲಿ ಗ್ರಾಮನೌಕರರೂ, ಸ್ಥಳೀಯ ಅಧಿಕಾರಿಗಳೂ ಹಾಕತಕ್ಕದ್ದು.

೬೫. ಕೆಲಸದ ಆರಂಭ ಮತ್ತು ಮುಗಿವು.—ಡೆಪ್ಯುಟಿ ಕಮಿಷನರವರು ಅಥವಾ ಪ್ರೆಸಿಡೆಂಟರು ಅಪ್ಪಣೆ ಮಾಡುವ ಮೇರೆ ೧೯೪೦ನೆ ಇಸವಿ ಜೂಲೈ ತಿಂಗಳ ಆರಂಭದಲ್ಲಿ ಒಂದು ದಿವಸ ಮನೆಗಳಿಗೆ ನಂಬರು ಹಾಕುವ ಕೆಲಸ ಡಿಸ್ಟ್ರಿಕ್ಟು ಮತ್ತು ನಗರಗಳಲ್ಲಿ ಎಲ್ಲಾ ಕಡೆಯೂ ಆರಂಭ ಆಗಬೇಕು ; ಮತ್ತು ಆರಂಭವಾದ ಮೇಲೆ ಸಾಧ್ಯವಾದಷ್ಟು ಜಾಗ್ರತೆ ಮುಗಿಸಲ್ಪಡಬೇಕು. ಕೊನೇಪಕ್ಷ ೧೯೪೦ನೆ ಸೆಪ್ಟಂಬರು ೧೫ನೇ ತಾರೀಖಿನ ವೇಳೆಗೆ ಈ ಕೆಲಸ ಎಲ್ಲಾ ಕಡೆಯೂ ಮುಗಿದಿರಬೇಕು.

೬೬. ನಂಬರು ಪಾಂಕ್ತವಾಗಿರಬೇಕು.—ಗ್ರಾಮಾಂತರದಲ್ಲಿ ಗ್ರಾಮ ಕ್ಕೆಲ್ಲ ಸಾಲಾಗಿ ಒಂದು ಏಣಿಕೆ ಬರಬೇಕು. ನಗರಗಳಲ್ಲಿ ಒಂದೊಂದು ಸರ್ಕಲ್ಲಿಗೆ ಬಂದೊಂದು ಏಣಿಕೆ ಇರಬೇಕು. ಪಟ್ಟಣಗಳಲ್ಲಿ ಒಂದೊಂದು ಡಿವಿಜನ್ನಿಗೆ ಒಂದು ಏಣಿಕೆ ಇರಬೇಕು. ಎನ್ಯೂಮರೇಟರು ನಂಬರುವಾರು ಮನೆಯಿಂದ ಮನೆಗೆ ಹೋಗುವುದಕ್ಕೆ ಸುಲಭವಾಗಿ ಅನುಕೂಲವಾಗಿರುವರೀತಿಯಲ್ಲಿ ನೋಡಿ ನಂಬರು ಹಾಕಬೇಕು. ಬೇರೆ ಬರದೊಂದು ಗ್ರಾಮಕ್ಕೆ ಬೇರೆ ನಂಬರು ಏಣಿಕೆ ಆರಂಭ ಮಾಡಬೇಕು. ನಗರಗಳಲ್ಲಿ ಒಂದೊಂದು ಸರ್ಕಲಿಗೂ ಪಟ್ಟಣಗಳಲ್ಲಿ ಒಂದೊಂದು ಮುನಿಸಿಪಲ್ ಡಿವಿಜನಿಗೂ ಬೇರೆ ಏಣಿಕೆ ಆರಂಭಿಸಬೇಕು. ಖಾನೇಷುಮಾರಿ ಮುಂತಾದ ಬೇರೆ ಕೆಲಸಕ್ಕಾಗಿ ಮನೆಗಳಿಗೆ ನಂಬರು ಹಾಕಿದಾಗಲ್ಲಿ ಆ ನಂಬರುಗಳನ್ನೇ ಸೆನಸ್ ಕೆಲಸಕ್ಕೂ ಇಟ್ಟುಕೊಳ್ಳುತ್ತೇವೆ ಎನ್ನಬಾರದು.

೬೭. ಮಜರೆಗಳನ್ನು ಗ್ರಾಮದ ಮನೆಗಳ ಒಟ್ಟು ಏಣಿಕೆಯಲ್ಲಿ ಸೇರಿಸ ಬೇಕು.—ಗ್ರಾಮಕ್ಕೆ ಬೇರೆ, ಮಜರೆಗೆ ಬೇರೆಯಾಗಿ ನಂಬರು ಆರಂಭಮಾಡಕೂ ಡದು. ಅಸಲಿ ಗ್ರಾಮದ ಮನೆಗಳ ನಂಬರು ಮುಗಿದ ಮೇಲೆ ಮಜರೆ ಮನೆಗ ಳಿಗೂ ಅದೇ ಏಣಿಕೆಯನ್ನು ಮುಂದಕ್ಕೆ ತೆಗೆದುಕೊಂಡು ಹೋಗಬೇಕು. ಹಾಗೆಯೇ ಬಣಜಾರರ (ಲಂದಾಣಿಗಳ) ತಾಂಡಗಳು, ಕೊರಚ, ಕೊರಮ, ಸೋಲಿಗ, ಬೈಲುವಡ್ಡ ಮುಂತಾದವರ ಗುಡಿಸಲುಗಳು, ಆಪಿಕಣರ್ಾಟಕರ ಕೇರಿ ಫಾಟ್ ಪೋಲೇನು ಸ್ವೀಪರ್, ಉಕ್ಕಡ, ಈಡಿಗರ ಗುಡಿಪಲು, ಹೊಲಗಳಲ್ಲಿರುವ ರೈತರ ವಾಸದ ಮನೆಗಳು, ಇವುಗಳಲ್ಲಿ ಯಾವುದನ್ನೂ ಮರೆಯದೆ ಗ್ರಾಮದ ಅದೇ ಏಣಿಕೆಯಲ್ಲಿ ಸೇರಿಸಬೇಕು. ಏಂಗಡವಾಗಿರುವ ಭಾಗವನ್ನು ಗುರುತಿನು ವುದಕ್ಕೂ ಪಟ್ಟಿಯಲ್ಲಿ ಸುಲಭವಾಗಿ ಕಯಾಟಿಡಿಯುವುದಕ್ಕೂ, ಅಲ್ಲಿ ಸೆನಸ್ ಬ್ಲಾಕುಗಳನ್ನು ವಿಸ್ತರಿಸುವುದಕ್ಕೂ ಅನುಕೂಲಿಸುವಂತೆ ಫಾರ್ಜು ಲಿಸ್ಟಿನಲ್ಲಿ ಅಂಥಾ ಭಾಗ ಆರಂಭವಾಗುವ ಕಡೆ ಕೆಂಪು ಮಸಿಯಿಂದ ಒಂದು ಗೆರೆ—ಎಳೆದು ಇದು ಪ್ರತ್ಯೇಕವಾದ ಭಾಗ ಎಂದು ಸೂಚಿಸಬಹುದು.

೬೮. ಒಂದು ಪಟ್ಟಣ ಅಥವಾ ನಗರದ ಆವರಣದಲ್ಲಿ ಒಂದು ಹಳ್ಳಿಯ ಸ್ವಲ್ಪ ಭಾಗ ಸೇರಿರುವ ಸಂದರ್ಭದಲ್ಲಿ ಹಾಗೆ ಸೇರಿದ ಆ ಹಳ್ಳಿಯ ಜಮೀನಿನ ಮೇಲಿರುವ ಮನೆಗಳಿಗೆ ಆಯಾ ಪಟ್ಟಣದ ಅಥವಾ ನಗರದ ನಂಬರುಗಳನ್ನು ಕೊಡತಕ್ಕದ್ದು. ಪಟ್ಟಣದಲ್ಲಿ ಸೇರಿದ ಭಾಗವಲ್ಲದೆ ಉಳಿದ ಅಂಥ ಗ್ರಾಮದ ಮನೆಗಳಿಗೆ ಗ್ರಾಮದ ವರವಾಗಿ ಬೇರೆ ಸಂಖ್ಯೆಯನ್ನು ಆರಂಭಿಸಬೇಕು. ಇದು ಈ ಕೆಳಗಿನ ಉದಾಹರಣೆಯಿಂದ ಸ್ಪಷ್ಟವಾಗುವುದು.

ದಾವಣಗೆರೆ ಮುನಿಸಿಪಾಲಿಟಿಯಲ್ಲಿ ಆನೆಕೊಂಡ, ನಿಟ್ಟುವಳ್ಳಿ ಗ್ರಾಮಗಳ ಜಮೀನು ಸೇರಿದೆ ಎಂದು ಇಟ್ಟುಕೊಳ್ಳಿ. ದಾವಣಗೆರೆ ಮುನಿಸಿಪಾಲಿಟಿಯ ಒಳಾ ಯದಲ್ಲಿ ಇರಬಹುದಾದ ಜಮೀನಿನಮೇಲೆ ಕಟ್ಟಿರುವ ಎಲ್ಲಾ ಮನೆಗಳೂ ದಾವಣ ಗೆರೆ ಮುನಿಸಿಪಾಲಿಟಿಗೆ ಸೇರಿದುವು. ಮುನಿಸಿಪಾಲಿಟಿಯ ಸೆನಸ್ ನಂಬರುಗಳ ನದಲ್ಲಿ ಅಂಥ ಮನೆಗಳ ನಂಬರನ್ನು ಹಾಕಬೇಕು. ದಾವಣಗೆರೆಯ ಒಳಾಯದಲ್ಲಿ ಸೇರಿದ ಜಮೀನುಗಳು ಹೋಗಲಾಗಿ ಆನೆಕೊಂಡ ನಿಟ್ಟುವಳ್ಳಿ ಗ್ರಾಮಗಳಲ್ಲಿ ಉಳಿ ದಿರುವ ಭಾಗಕ್ಕೆಲ್ಲಾ ಆನೆಕೊಂಡಕ್ಕೆ ಬೇರೆ, ನಿಟ್ಟುವಳ್ಳಿಗೆ ಬೇರೆ ಆಯಾ ಗ್ರಾಮದ ವರವಾಗಿ ನಂಬರು ಹಾಕಬೇಕು.

೬೯. ಮೊದಲನೇ ಕೊನೇ ನಂಬರುಗಳು.—ಒಂದು ಗ್ರಾಮ ಅಥವಾ ಪೊಹರ್ಲಾಕ್ಕೆ ಮನೆ ಎಣಿಕೆ ಬಂದಾಗಿರುವುದರಿಂದ ಹೊಸದಾಗಿ ಬ್ಲಾಕಿನ ಮೊದಲನೇ ಮನೆ ಯಾವುದು ಕೊನೇ ಮನೆ ಯಾವುದು ಎಂದು ತಿಳಿಯುವುದಕ್ಕೆ ಗುರುತುಮಾಡಿರಬೇಕು. ಗ್ರಾಮದಲ್ಲಿ ನೂರು ಮನೆ ಇದೆ ಎಂದು ಇಟ್ಟುಕೊಳ್ಳಿ. ಒಂದರಿಂದ ನೂರರವರೆಗೆ ನೂರು ಮನೆಗೂ ನೂರು ನಂಬರನ್ನು ಹಾಕುವುದಾಗುತ್ತದೆ. ಆದರಲ್ಲಿ ೧ ರಿಂದ ೫೦-ರ-ವರೆಗೆ ಒಂದು ಬ್ಲಾಕಿರಬಹುದು. ೫೧ ರಿಂದ ೬೮ ವರೆಗೆ ಇನ್ನೊಂದು ಬ್ಲಾಕಿರಬಹುದು. ೬೮ರಿಂದ ೧೦೦ರ ವರೆಗೆ ಮೂರನೇ ಬ್ಲಾಕಿರಬಹುದು. ಇಂಥಾ ಸಂದರ್ಭದಲ್ಲಿ ಆಯಾ ಬ್ಲಾಕಿನ ಮೊದಲನೆ ಮನೆಗಳಾದ ೧ನೇ ಮನೆ, ೫೧ನೇ ಮನೆ, ೬೮ನೇ ಮನೆ ಇವುಗಳ ಮೇಲೆ ನಂಬರಿನ ಸುತ್ತ ಒಂದು ತ್ರಿಕೋಣವನ್ನು △ ಬರೆಯಬಹುದು. ಆಯಾ ಬ್ಲಾಕಿನಲ್ಲಿ ಕೊನೆಯ ಮನೆ ಆದ ೫೦, ೬೭, ೧೦೦ನೇ ನಂಬರಿನ ಮನೆಗಳ ಮೇಲೆ ನಂಬರಿನ ಸುತ್ತ ಒಂದು ವೃತ್ತವನ್ನು ○ ಬರೆಯಬಹುದು.

೬೦. ಕಟ್ಟಡಗಳನ್ನು ಮರೆಯಕೂಡದು.—ಮನೆಗಳಿಗೆ ನಂಬರು ಹಾಕುವಲ್ಲ ಯಾವ ಮನೆಯೂ ಕೈಬಿಟ್ಟು ಹೋಗದ ಹಾಗೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಸೆನ್ಸಸ್ ದಿನದ ವೇಳೆಗೆ ಮುಗಿದು ವಾನಕ್ಕೆ ಅರ್ಹವಾಗಬಹುದೆಂದು ತೋರುವ ಎಲ್ಲಾ ಕಟ್ಟಡಗಳಿಗೂ ನಂಬ್ಯೆಯನ್ನು ಹಾಕಲೇಬೇಕು. ಯಾವ ದಾದರೂ ಕಾರಣದಿಂದ ಒಂದು ಕಟ್ಟಡಕ್ಕೆ ನಂಬರು ಹಾಕದೇ ಕೈತಪ್ಪಿದರೆ ಆಥವಾ ಊರಿನ ಕಟ್ಟಡಗಳಿಗೆ ನಂಬರು ಹಾಕಿದ ಮೇಲೆ ಕಟ್ಟಡ ಮುಗಿದು ಉಪಯೋಗಕ್ಕೆ ಬಂದರೆ ಆಂಥಾ ಸಂದರ್ಭದಲ್ಲಿ ಹಾಗೆ ಕೈಬಿಟ್ಟುಹೋದ ಅಥವಾ ಹೊಸದಾಗಿ ಉಪಯೋಗಕ್ಕೆ ಬಂದ ಮನೆಗೆ ಅದರ ಹಿಂದಿನ ಮನೆಯ ನಂಬರನ್ನು ಹಾಕಿ ಒಂದು ಉಪನಂಬ್ಯೆಯನ್ನು ಸೇರಿಸಬೇಕು. ಎಂದರೆ ೫೬ನೆಯ ಮತ್ತು ೫೭ನೆಯ ಕಟ್ಟಡಗಳ ಮಧ್ಯೆ ಇರತಕ್ಕ ಬಂದು ವನೆ ಕೈಬಿಟ್ಟು ಹೋಗಿದ್ದರೆ ಅಥವಾ ಆ ಸ್ಥಳದಲ್ಲಿ ಒಂದು ಹೊಸಮನೆ ಆದರೆ ಆಂಥಾ ಮನೆಗೆ ೫೬/೧ ಎಂದು ಬರೆಯಬೇಕು. ಇನ್ನೊಂದು ಕಟ್ಟಡ ಹೊಸದಾಗಿ ಆಗಿದ್ದಲ್ಲಿ ೫೬/೨ ಎಂದು ಬರೆಯಬೇಕು.

೬೧. ನಂಬರುಗಳನ್ನು ಹೇಗೆ ಬರೆಯಬೇಕು.—ನಂಬರುಗಳನ್ನು ಯಾವ ದಾದರೂ ಒಂದು ಬಣ್ಣದಿಂದ ಬರೆಯಬೇಕು. ಒಂದೊಂದು ಗ್ರಾಮ, ಪಟ್ಟಣ ಅಥವಾ ನಗರದಲ್ಲಿ ಸೆನ್ಸಸ್ ನಂಬರಿಗಾಗಿ ಒಂದೇ ರೀತಿಯ ಬಣ್ಣವನ್ನು ಉಪಯೋಗಿಸಬೇಕು. ಮನೆಯ ಮುಂದುಗಡೆಯ ದಾಗಿಲ ಮೇಲೆ ಅಥವಾ ಪಕ್ಕದಲ್ಲಿ ಗೋಡೆಯ ಮೇಲೆ ಸ್ಪಷ್ಟವಾಗಿ ತಿಳಿಯುವ ಕಡೆ ಬಿಳುಪಿನ ಮೇಲೆ ಬಣ್ಣದಲ್ಲಿ ಅಂಕೆಯನ್ನು ಬರೆಯಬೇಕು. ಮಳೆಯಿಂದ ತೊಯ್ದು ಅಳಿಸಿಹೋಗುವುದರಿಂದಾಗಲಿ ಅಕಸ್ಮಾತ್ತಾಗಿ ಮಕ್ಕಳು ಆಟದ ವೇಳೆಯಲ್ಲಿ ತಿಕ್ಕುವುದು, ತಿದ್ದುವುದು ಮುಂತಾದ ಕಾರಣಗಳಿಂದಾಗಲಿ ಕೆಡದಂತೆ ಸರಿಯಾದ ಸ್ಥಳದಲ್ಲಿ ಅಂಕೆಯನ್ನು ಬರೆಯಬೇಕು. ೧೯೪೧ನೇ ಆಗಸ್ಟು ೩೧ನೇ ತಾರೀಖಿನ ವರೆಗೆ ಕಟ್ಟಡ ಹುಣ್ಣಿಮೆ ಮೊದಲಾದ ಕಾರಣದಿಂದ ಸುಣ್ಣಬಣ್ಣ ಮಾಡುವಾಗ ಸೆನ್ಸಸ್ ಅಂಕೆಗಳನ್ನು ಅಳಿಸಕೂಡದೆಂದು ಮನೆಯ ಜನಕ್ಕೆ ತಿಳಿಸಬೇಕು. ಅಂಕೆಗಳನ್ನು ಹಾಗೆ ಕೆಡಿಸುವವರು ಸೆನ್ಸಸ್ ಆಕ್ಟ್ (Act) ಪ್ರಕಾರವಾಗಿ ಶಿಕ್ಷೆಗೆ ಗುರಿಯಾಗುವರೆಂದು ಅವರಿಗೆ ಎಚ್ಚರಿಕೆ ಹೇಳಬೇಕು. ಅಂಕೆಯನ್ನು ಕದವ ಮೇಲೆ ಬರೆಯುವುದೇ ಒಳ್ಳೆದಾದು. ಬಾಗಿಲುಬಳಿ ಗೋಡೆಯಮೇಲೆ ಬರೆಯುವುದೂ ಅನುಕೂಲ. ಬಡವರು ವಾಸಮಾಡುವದಾದ ಮರದ ಬಾಗಿಲುಗಳಿಲ್ಲದ ಗಿಡ್ಡುಗೋಡೆಯ ಹುಲ್ಲು ಛಾವಣಿ ಮನೆಯ

ಮೇಲೆ ನಂಬರು ಬರೆಯುವುದಕ್ಕೆ ಅನುಕೂಲವಿರುವುದಿಲ್ಲ. ಇಂಥ ಸಂದರ್ಭದಲ್ಲಿ ನಂಬರನ್ನು ಒಂದು ಹಲಗೆ ಅಥವಾ ತಗಡು, ಇಟ್ಟಿಗೆ ಅಥವಾ ಹೆಂಚು, ಇನ್ನೇನೂ ಇಲ್ಲದಿದ್ದರೆ ಒಂದು ಕಲ್ಲು, ಇಂಥಾದ್ದರ ಮೇಲೆ ಬರೆದು ಮನೆಯ ಯಜಮಾನನ ಕೈಗೆ ಕೊಟ್ಟು ಭದ್ರವಾಗಿಟ್ಟಿರಬೇಕೆಂದೂ ಸೆನ್ಸಸ್ ಅಧಿಕಾರಿಗಳು ಕೇಳಿದಾಗ ಅದನು ತೋರಿಸಬೇಕೆಂದೂ ಅವರಿಗೆ ತಿಳುವಳಿಕೆ ಕೊಡಬೇಕು.

೭೨. ಬಣ್ಣ ಮತ್ತು ಬಣ್ಣ ಹಚ್ಚುವ ಸಾಮಾನು.—ಬೇರೆ ಯಾವ ಸಾಮಾನೂ ಇಲ್ಲದಿದ್ದಲ್ಲಿ ಬಿಳಿಯ ಬಣ್ಣವನ್ನು ಸುಣ್ಣದಿಂದ ಹಚ್ಚಿ ಅದರ ಮೇಲೆ ಕಂದನೆ ಅಥವಾ ಕಾವಿಯಿಂದ ಅಂಕೆಗಳನ್ನು ಬರೆಯಬಹುದು. ಬರೆಯುವುದಕ್ಕೆ ಈಚಲು ಅಥವಾ ತೆಂಗಿನ ಮಟ್ಟೆಯ ಒಂದು ತುಂಡನ್ನು ಕೊನೆ ಜಜ್ಜಿ ಗುಜ್ಜನ್ನು ಮಾಡಿಕೊಳ್ಳಬಹುದು. ಯಾವ ಪದಾರ್ಥವನ್ನು ಉಪಯೋಗಿಸುವುದೆಂದು ತಾಲ್ಲೂಕಿನ ಅಧಿಕಾರಿಗಳು ನಿಶ್ಚಯಿಸಿ ಗ್ರಾಮನೌಕರರಿಗೆ ಅದನ್ನು ಮಾಡಿಸಿ ಹಂಚ ಬಹುದು. ಪಟ್ಟಣಗಳಲ್ಲಿ, ನಗರಗಳಲ್ಲಿ, ಎಕ್ಸೈಜು ಡಿಪಾರ್ಟುಮೆಂಟಿನವರು ಈಚಲು ಮರದ ನಂಬರಿಗೆ ಉಪಯೋಗಿಸುವ ಬಣ್ಣವನ್ನು ಸೆನ್ಸಸ್ ನಂಬರಿಗಾಗಿ ಉಪಯೋಗಿಸಬಹುದು.

೭೩. ಇಂಗ್ಲೀಷು ಮತ್ತು ಕನ್ನಡದ ಅಂಕೆಗಳು.—ನಗರಗಳೆಲ್ಲಿಯೂ ಡಿಸ್ಟ್ರಿಕ್ಟು ಪಟ್ಟಣಗಳಲ್ಲಿಯೂ ಡೆಪ್ಯುಟಿ ಕಮಿಷನರವರು ಅಪ್ಪಣೆಕೊಡುವ ಇತರ ಮುನಿಸಿಪಲ್ ಊರುಗಳಲ್ಲಿಯೂ ಅಂಕೆಗಳನ್ನು ಇಂಗ್ಲೀಷಿನಲ್ಲಿ ಬರೆಯಬಹುದು. ಉಳಿದ ಎಲ್ಲಾ ಸ್ಥಳಗಳಲ್ಲಿಯೂ ಅವುಗಳನ್ನು ಕನ್ನಡದಲ್ಲಿ ಬರೆಯಬೇಕು. ಒಂದೊಂದು ಅಂಕೆ ಎರಡು, ಮೂರು ಅಂಗುಲದಷ್ಟು ಉದ್ದವಿರಬೇಕು.

೭೪. ಹಿಂದಿನ ಸೆನ್ಸಸ್ ನಂಬರುಗಳನ್ನು ಅಳಿಸುವುದು.—ಈ ಸಲದ ಎಣಿಕೆಯಲ್ಲಿ ಹೆಚ್ಚು ಕಡಿಮೆಯಾಗದೆ ಇರುವುದಕ್ಕಾಗಿ ಮನೆಗಳ ಮೇಲೆ ಕಾಣಬ ಹುದಾದ ಹಿಂದಿನ ಸೆನ್ಸಸ್ ನಂಬರುಗಳನ್ನು ಹೊಸನಂಬರು ಹಾಕುವ ವೇಳೆ ಅದೇ ಕೆಲಸವಾಗಿ ಕೆಡಿಸಬೇಕು. ಹೊಸ ಅಂಕೆಯನ್ನು ಬರೆಯುವವೇಳೆ ಅದೇ ಗುಜ್ಜಿನಿಂದ ಹಳೇ ಅಂಕೆಯ ಮೇಲೆ ಸ್ಪಷ್ಟವಾಗಿ ಎರಡು ಗೆರೆ ಎಳೆದರೆ ಅವುಗ ಳನ್ನು ಮುಂದೆ ಉಪಯೋಗಿಸದಂತಾಗುವುದು.

ಸೆಕ್ಷನ್ ೩.

ಮನೆಗಳ ಪಟ್ಟಿ ಮತ್ತು ಬ್ಲಾಕು ಪಟ್ಟಿ.

೭೫. ಮನೇ ಪಟ್ಟಿ ಎರಡು ಪ್ರತಿಯಾಗಿ ತಯಾರಾಗಬೇಕು.—ವಾಸದ ಮನೆಗಳನ್ನೂ ಇತರ ಕಟ್ಟಡಗಳನ್ನೂ ಹೀಗೆ ನಂಬರು ಮಾಡಿದ ಮೇಲೆ ಗ್ರಾಮ ನೌಕರರು ತಮ್ಮ ತಮ್ಮ ಗ್ರಾಮಕ್ಕೆ ಮನೇ ಪಟ್ಟಿಯನ್ನು ಮಾಡಬೇಕು. ಇದನ್ನು ಈ ಬಗ್ಗೆ ಗೊತ್ತಾದ ತಖ್ತೆಯಲ್ಲಿ ಎರಡು ಪ್ರತಿಯಾಗಿ ತಯಾರಿಸಬೇಕು.

೭೬. ಈ ಪಟ್ಟಿಗಳ ಉಪಯೋಗ.—ಈ ಪಟ್ಟಿಯ ಪ್ರತಿಗಳನ್ನು ಅವರು ಥಾರ್ಜು ಸೂಪರಿಂಟೆಂಡೆಂಟರ ಆಫೀಸಿಗೆ ಕಳುಹಿಸಬೇಕು. ಆ ಆಫೀಸಿನಲ್ಲಿ ಇವು ಗಳನ್ನು ಸರ್ಕಲ್‌ವಾರ್ ಸೇರಿಸಿ ಸರ್ಕಲಿನ ಎಲ್ಲಾ ಪಟ್ಟಿಗಳ ಒಂದು ಪ್ರತಿಯನ್ನು ಆಯಾ ಸರ್ಕಲಿನ ಸೂಪರ್‌ವೈಸರಿಗೆ ಕೊಡಬೇಕು. ಇನ್ನೊಂದು ಪ್ರತಿ ಥಾರ್ಜು ಸೂಪರಿಂಟೆಂಡೆಂಟರ ಸುಪರ್ದಿನಲ್ಲಿ ಇರತಕ್ಕದ್ದು.

೭೭. ಬ್ಲಾಕು ಲಿಸ್ಟು.—ಮನೆ ಪಟ್ಟಿಯಿಂದ ಆಯಾ ಬ್ಲಾಕಿಗೆ ಸಂಬಂಧ ಪಟ್ಟ ತಪಶೀಲನ್ನು ಎತ್ತಿ ಬರೆದರೆ ಅದು ಬ್ಲಾಕ್‌ಲಿಸ್ಟು ಆಗುತ್ತದೆ. ಬ್ಲಾಕು ಲಿಸ್ಟುಗಳನ್ನು ಥಾರ್ಜು ಸೂಪರಿಂಟೆಂಡೆಂಟರವರ ಆಫೀಸಿನಲ್ಲಿ ಆಕೊ್ಯಬರ್ ನವೆಂಬರು ತಿಂಗಳನಲ್ಲಿ ತಯಾರಿಸಬೇಕು.

ಸೆಕ್ಷನ್ ೪.

ಇತರ ವಿಷಯ.

೭೮. ಎಚ್ಚರಿಕೆ.—ಮನೆಗಳ ಲೆಕ್ಕ ಸೆನಸ್ ಕೆಲಸದ ಮುಖ್ಯ ಆಧಾರ. ಆದಕಾರಣ ಈ ಕೆಲಸದಲ್ಲಿ ಕುಂದು ಬರಬಾರದು. ಮನೆ ಪಟ್ಟಿಯು ಯಾವ ಮನೆಯನ್ನೂ ಬಿಡದೆ ಸಂಪೂರ್ಣವಾಗಿರಬೇಕು.

೭೯. ಸಂದೇಹದ ಸಂದರ್ಭ.—ಮೇಲಿನ ತಿಳಿವಳಿಕೆಗಳ ಪ್ರಕಾರ ಯಾವುದಾದರೂ ಒಂದು ಕಟ್ಟಡಕ್ಕೆ ನಂಬರನ್ನು ಕೊಡುವುದೇ ಬಿಡುವುದೇ ಎಂದು ಸಂದೇಹ ಉಂಟಾದಲ್ಲಿ ಅಂಥಾ ಕಟ್ಟಡಕ್ಕೆ ಸಂಖ್ಯೆ ಹಾಕದೆ ಬಿಡುವುದಕ್ಕಿಂತ ಸಂಖ್ಯೆ ಒಂದನ್ನು ಕೊಡುವುದು ಕ್ಷೇಮ.

W.D 3906—GPB—10,000—15-6-40